**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ08-06-2026**

**ಪಾಟೀ ಸವಾಲುಃ ವಾದಿ ಪರ ಶ್ರೀ ಐ ಇ ಪಿ ವಕೀಲರಿಂದ**

ನಮಗೆ ಸೇರಿದ ಸರ್ವೆ ನಂ 147 ಕಸಬಾ ಹೋಬಳಿಯಲ್ಲಿರುವ 6 ಎಕರೆಯ ಜಾಗವನ್ನು ವಾದಿಯವರು ಅಕ್ರಮವಾಗಿ ಮಂಜೂರು ಮಾಡಿಸಿಕೊಂಡು ನಮ್ಮ ವಿರುದ್ದವೇ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಸ್ವತ್ತು ನನ್ನ ತಾತನಾದ ಮಂಜಯ್ಯ ಎ ಎಸ್ ರವರಿಗೆ ದರಕಾಸ್ತು ಮಂಜೂರಾಗಿರುತ್ತದೆ. ಸದರ ಮಂಜೂರಾತಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೆ ನಂ.147 ರಲ್ಲಿ ಒಟ್ಟು ಸುಮಾರು 31 ಎಕರೆ ಜಮೀನು ಇದೆ. ನಮಗೆ ಮಂಜೂರಾದ ನಂತರ ಅದರಲ್ಲಿ 25 ಎಕರೆ ಜಮೀನು ಉಳಿದುಕೊಂಡಿದೆ ಎಂದರೆ ಸರಿ. ವಾದಿಯವರಿಗೆ ಹೇಮಾವತಿ ರಿವರ್ ಪ್ರಾಜೆಕ್ಟ್ ನ ಅಡಿಯಲ್ಲಿ ಭೂ ಸ್ವಾಧೀನಪಡಿಸಿಕೊಂಡ ಮೇರೆಗೆ ಸ್ವತ್ತನ್ನು ಮಂಜೂರು ಮಾಡಿದ್ದು, ಸದರಿ ಆದೇಶ ಈಗ ರದ್ದಾಗಿರುತ್ತದೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಮ್ಮ 6 ಎಕರೆ ಜಮೀನಿನ ಪೂರ್ವಕ್ಕೆ ಎಸ್ ಡಿ ಕೃಷ್ಣಪ್ಪ ರವರ ಜಮೀನು. ಪಶ್ಚಿಮಕ್ಕೆ ಸರ್ವೆ ನಂ.147 ರಲ್ಲಿ ಉಳಿದ ಸರಕಾರಿ ಜಾಗ. ದಕ್ಷಿಣಕ್ಕೆ ಉಮೇಶ್ ರವರ ಜಾಗ. ಉತ್ತರಕ್ಕೆ ಸರ್ವೆ ನಂ. 147 ರ ಉಳಿದ ಜಾಗ ಇರುತ್ತದೆ. ನಾನು ಮೇಲೆ ಹೇಳಿದ ಚೆಕ್ಕುಬಂದಿಗೂ ನಿಪಿ.2 ರಲ್ಲಿರುವ ಚೆಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿ. ವಾದಿಯವರ ಸ್ವತ್ತಿನ ಚೆಕ್ಕುಬಂದಿ ಬೇರೆಯಾಗಿರುವುದರಿಂದ ವಾದಿಯವರ ಸ್ವತ್ತು ಮತ್ತು ನಮಗೆ ಮಂಜೂರಾದ ಜಾಗ ಬೇರೆ ಬೇರೆ ಕಡೆ ಇದೆ ಎಂದರೆ ಸರಿಯಲ್ಲ. ವಾದಿಯವರ ಸ್ವತ್ತು ಬೇರೆ ಸ್ವತ್ತಾಗಿದ್ದರೂ ಸಹ ಅವರಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಆ ಜಾಗ ನಮದೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮಂಜೂರಾತಿ ಆದ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.3 ಆದೇಶವು ನಾವು ದಾಖಲಿಸಿರುವ ಅರ್ಜಿಯ ಮೇಲಿನ ಆದೇಶವಾಗಿರುವುದಿಲ್ಲ, ಅದು ನನ್ನ ನೆರೆಹೊರೆಯವರಾದ ಚಂದ್ರೇಗೌಡರವರು ಸಲ್ಲಿಸಿರುವ ಅರ್ಜಿಯ ಮೇಲಿನ ಆದೇಶವಾಗಿರುತ್ತದೆ. ವಾದಿಯವರ ವಿರುದ್ದ ನಾವು ಯಾವುದೇ ದೂರನ್ನು ನೀಡಿರುವುದಿಲ್ಲ. ನಾವು ವಾದಿಯವರ ವಿರುದ್ದ ತಡೆಯಾಜ್ಞೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ದಾವಾ ಆಸ್ತಿಯು ನಮ್ಮದಾಗಿದ್ದರಿಂದ ವಾದಿಯವರ ವಿರುದ್ದ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸುತ್ತಿದ್ದೆ ಎಂದರೆ, ಸಾಕ್ಷಿದಾರರು

ನ್ಯಾಯಾಲಯದಲ್ಲಿ ದಾವೆ ಬಾಕಿ ಇರುವುದರಿಂದ ನಿರ್ಬಂದಕಾಜ್ಞೆ ಸಲ್ಲಿಸಲು ಸಾದ್ಯವಿಲ್ಲ ಎಂದು ಬಾವಿಸಿ ನಾವು ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಕಾಲಾವಕಾಶ ನೀಡಿ ಮುಂದೂಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೆ ಕೇ ಸ ಇ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**